ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮೂರವತ್ತೇಳನೆಯ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.

ದಕ್ಷಿಣ ಕನ್ನಡದ ಕೊಯ್ಲಾ ಪಶುಸಂಗೋಪನಾ ಕೇಂದ್ರ

೧೭೭೮. **ಶ್ರೀ ಬಿ ಎಂ. ಇದಿನಬ್ಬ (ಉಳ್ಳಾಲ).**—ಮಾನ್ಯ ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್, ವಕ್ಫ್ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ, ದಯವಿಟ್ಟು ಉತ್ತರಿಸುವರೇ.

ಅ) ದಕ್ಷಿಣ ಕನ್ನಡದ ಕೊಯ್ಲಾದಲ್ಲಿ ಕಳೆದ ೩ ವರ್ಷಗಳಿಂದಿರುವ ಪಶುಸಂಗೋಪನಾ ಕೇಂದ್ರವು ಲಾಭದಲ್ಲಿದೆಯೋ ಅಥವಾ ನಷ್ಟದಲ್ಲಿದೆಯೇ?

ಆ) ೧೯೮೮ನೇ ಮಾರ್ಚ್ ಅಖೈರ್‌ವರೆಗೆ ಹಾಗೂ ಹಾಲಿ ಇರುವ ಎಮ್ಮೆ, ಕೋಣ, ಹಸು, ಹಂದಿಗಳ ಸಂಖ್ಯೆ ಎಷ್ಟು?

ಇ) ಸದರಿ ಕೇಂದ್ರದಲ್ಲಿ ಉತ್ಪಾದಿಸಲಾಗುತ್ತಿರುವ ಹಾಲು ಜಿಲ್ಲೆಗೆ ಪೂರೈಸಲಾಗುವುದೇ?

ಈ) ಈ ಕೇಂದ್ರ ಅಭಿವೃದ್ಧಿ ಆಗಿರುವುದು ಸಮಾಧಾನಕರವಾಗಿದೆಯೇ, ಅಲ್ಲಿನ ಆಡಳಿತದಲ್ಲಿ ಕುಂದುಕೊರತೆಗಳೇನಾದರೂ ಇದೆಯೇ?

ಶ್ರೀ ಅಬ್ದುಲ್ ನಜೀರ್ ಸಾಬ್ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ನಷ್ಟದಲ್ಲಿದೆ.

ಈ ಜಾನುವಾರು ಕ್ಷೇತ್ರವನ್ನು ಕೇವಲ ಲಾಭಗಳಿಕೆಯ ಉದ್ದೇಶದಿಂದ ಸ್ಥಾಪನೆ ಮಾಡಿರುವುದಿಲ್ಲ ಮತ್ತು ಈ ಕೆಳಗೆ ತಿಳಿಸಿರುವ ಪಶುಪಾಲನೆ ಚಟುವಟಿಕೆಗಳ ಅಭಿವೃದ್ಧಿ ಮತ್ತು ವಿಸ್ತರಣಾ ಕಾರ್ಯಕ್ರಮಗಳ ಮಾದರಿ ಕ್ಷೇತ್ರವಾಗಿದೆ.

೧) ಒಳ್ಳೆಯ ವಂಶಾವಳಿಯ ಹೋರಿ ಕರುಗಳನ್ನು ಉತ್ಪಾದಿಸಿ, ಕೃತಕ ಗರ್ಭಧಾರಣಾ ಪ್ರಯೋಗಕ್ಕಾಗಿ ಸರಬರಾಜು ಮಾಡಲಾಗುತ್ತಿದೆ.

೨) ಉತ್ತಮ ತಳಿಯ ವಿವಿಧ ಜಾತಿಯ ಹುಲ್ಲನ್ನು ಬೆಳೆಸಿ ಅದರ ಬೇರು ಮತ್ತು ಬೀಜಗಳನ್ನು ರೈತರಿಗೆ ಒದಗಿಸಲಾಗುತ್ತಿದೆ.

೩) ರೈತರಿಗೆ ಪಶುಪಾಲನೆಯ ವಿವಿಧ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತಿದೆ.

೪) ಉತ್ತಮ ತಳಿಯ ಕೋಳಿ ಮರಿಗಳ ಸಾಕಾಣಿಕೆ ಮತ್ತು ಅವುಗಳನ್ನು ರೈತರಿಗೆ ಸರಬರಾಜು ಮಾಡುವುದು.

೫) ರೈತರಿಗೆ ಪಶುವೈದ್ಯ ಸೇವೆಯನ್ನು ಒದಗಿಸುವುದು.

೬) ಆರೋಗ್ಯಕರವ ದ ಹಾಲನ್ನು ಉತ್ಪಾದಿಸಿ ಡೈರಿಗೆ ಸರಬರಾಜು ಮಾಡುವುದು.

ಆ) ದಿನಾಂಕ ೩೧-೩-೮೮ಕ್ಕೆ

	ಎಮ್ಮೆ	ಕೋಣ	ಹಸು	ಹಂದಿ	ಕೋಳಿ
ಇದ್ದವುಗಳು ...	೨೯	ಇಲ್ಲ	೧೩೯	೬೭	೩೮
ಹಾಲಿ ಇರುವುವು ...	೨೯	ಇಲ್ಲ	೧೪೦	೬೩	೪೩೭

ಇ) ಇಡೀ ಜಿಲ್ಲೆಗೆ ಹಾಲು ಪೂರೈಸುವ ಉದ್ದೇಶವಿಲ್ಲ. ಆದರೆ ಉತ್ಪತ್ತಿ ಆದ ಹಾಲನ್ನು ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಮಂಗಳೂರು, ಇವರಿಗೆ ಸರಬರಾಜು ಮಾಡಲಾಗುತ್ತಿದೆ.